Indian Journal of History and Archaeology

ISSN (E):2582-225X
VOL-1, ISSUE- 6, MARCH-APRIL, 2020, 23-32

# ಅಂಬೇಡ್ಕರ ಮತ್ತು ರಾಜ್ಯ ನೀತಿ ನಿರ್ದೇಶಕ ತತ್ತ್ವಗಳು

(AMEDKAR and DIRECTIVE PRINCIPAL OF STATE POLICY)

**ಡಾ.ಎಂ.ರಾಚಪ್ಪಾಜಿ**

**ಡಾ.ಎಂ.ರಾಚಪ್ಪಾಜಿ**
ಅಧ್ಯಾಪಕರು
ಡಾ.ಬಿ.ಆರ್.ಅಂಬೇಡ್ಕರ್
ಸಂಶೋಧನ ಹಾಗೂವಿಸ್ತರಣ ಕೇಂದ್ರ
ಮೈಸೂರು ವಿಶ್ವವಿದ್ಯಾನಿಲಯ,
ಮಾನಸಗಂಗೋತ್ರಿ, ಮೈಸೂರು

ಭಾರತ ಸಂವಿಧಾನ ರಚನಾ ಸಭೆಯಲ್ಲಿ ಮಹತ್ತರವಾದ ಪಾತ್ರವನ್ನು ನಿರ್ವಹಿಸಿರುವ ಅಂಬೇಡ್ಕರ್ ಅವರು ಕರಡು ರಚನೆಯಲ್ಲಿ ಕೆಲವು ಮಹತ್ವಪೂರ್ಣ ವಿಚಾರಗಳನ್ನು ಒಳಪಡಿಸಲು ತಮ್ಮದೇ ಆದಂಥ ಪ್ರಭಾವವನ್ನು ಬೀರಿರುತ್ತಾರೆ. ಅಂದರೆ, ದಮನಿತ ಸಮುದಾಯಗಳ ಹಿತಾಸಕ್ತಿಯನ್ನು ಕಾಪಾಡುವ ದೃಷ್ಟಿಯಿಂದ ಹಾಗೂ ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿಗಾಗಿ ವಿಶೇಷವಾದ ವಿಷಯಗಳಿಗೆ ಆಧ್ಯತೆಯನ್ನು ನೀಡಿದರು. ಅವುಗಳಲ್ಲಿ ರಾಜ್ಯ ನೀತಿ ನಿರ್ದೇಶಕ ತತ್ವಗಳು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದಿವೆ. ಏಕೆಂದರೆ ಇದು ರಾಷ್ಟ್ರದಲ್ಲಿನ ಪ್ರಜೆಗಳಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು ದೊರಕಿಸಿಕೊಡುವ ಉದ್ದೇಶವನ್ನು ಹೊಂದಿರುವುದಾಗಿದೆ. ಆದ್ದರಿಂದ, ಇದನ್ನು ಅರಿತ ಸಂವಿಧಾನದ ನಿರ್ಮಾಪಕರು ಸಂವಿಧಾನ ರಚನಾ ಸಭೆಯಲ್ಲಿ ಪ್ರಧಾನವಾಗಿ ಚರ್ಚಿಸಿ ನಂತರದಲ್ಲಿ ಇದಕ್ಕೆ ರಾಜ್ಯ ನೀತಿ ನಿರ್ದೇಶಕ ತತ್ವಗಳು ಎಂಬ ಹೆಸರಿನಿಂದ ನೂತನ ಸಂವಿಧಾನದಲ್ಲಿ ಸೇರ್ಪಡೆಗೊಂಡಿರುತ್ತದೆ.

ಕೇವಲ ಜನರು, ಜನರಿಂದ ಮತ್ತು ಜನರಿಗಾಗಿ ಇರುವ ಆಳ್ವಿಕೆ ಬದಲಾಗಿ ದೇಶದ ಸಮಸ್ತ ಜನಸಮುದಾಯದವರ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಸಮಸ್ಯೆಗಳನ್ನು ಶಾಂತಿಯುತ ಮಾರ್ಗಗಳ ಮೂಲಕ ಪರಿಹರಿಸುವ ಸರ್ಕಾರವೇ ಪ್ರಜಾಪ್ರಭುತ್ವ ಸರ್ಕಾರವಾಗಿದೆ. ಪ್ರಜೆಗಳ ಮೂಲಭೂತ ಹಕ್ಕುಗಳಿಂದ ರಾಷ್ಟ್ರದ ಎಲ್ಲಾ ಪ್ರಜೆಗಳಿಗೆ ಕೇವಲ ರಾಜಕೀಯ ನ್ಯಾಯ ಸಿಕ್ಕಿದೆ. ಆದ್ದರಿಂದ ಅಂಬೇಡ್ಕರ್ ಅವರ ಪ್ರಕಾರ "ಜನರ ಆರ್ಥಿಕ ಹಾಗೂ ಸಾಮಾಜಿಕ ಸಮಸ್ಯೆ ಪರಿಹರಿಸಿದಾಗ ಮಾತ್ರ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥ ಬರುತ್ತದೆ.

ಹಾಗಾಗಿ ಭಾರತ ಸಂವಿಧಾನದ 4ನೇ ಭಾಗದಲ್ಲಿ ರಾಜ್ಯ ನೀತಿ ನಿರ್ದೇಶಕ ತತ್ವಗಳನ್ನು ಐರ್ಲೆಂಡಿನಿಂದ ಹಾಗೂ 1935ರ ಕಾಯ್ದೆಯಲ್ಲಿನ ಸಾಮಾಜಿಕ ನಿರ್ದೇಶನ ತತ್ವಗಳಿಂದ ಸ್ಫೂರ್ತಿ ಪಡೆದು ಸೇರಿಸಲಾಗಿರುತ್ತದೆ"[1] ಎಂದಿದ್ದಾರೆ. ಅಂದರೆ, ಭಾರತದಲ್ಲಿ ರಾಜಕೀಯ ಸ್ವಾತಂತ್ರ್ಯ ಮಾತ್ರ ಪಡೆದುಕೊಳ್ಳಲಾಗಿದೆ. ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯಗಳನ್ನು ಪಡೆದಿಲ್ಲ.

ರಾಜ್ಯನೀತಿ ನಿರ್ದೇಶಕ ತತ್ವಗಳ ಕುರಿತು ಸಂವಿಧಾನ ಸಭೆಯಲ್ಲಿ ಅಂಬೇಡ್ಕರ್ ಮತ್ತು ಕೆ.ಟಿ. ಷಾ ಅವರ ನಡುವೆ ಮಹತ್ವದ ಚರ್ಚೆಯೊಂದು ನಡೆಯಿತು. ಕೆ.ಟಿ. ಷಾ ಅವರು ನಿರ್ದೇಶಕ ತತ್ವಗಳಲ್ಲಿ ಸಮಾಜವಾದಿ ತತ್ವಗಳು ಇಲ್ಲ ಎಂಬ ಅನುಮಾನವನು ವ್ಯಕ್ತಪಡಿಸಿರುತ್ತಾರೆ. ಅದಕ್ಕೆ ಅಂಬೇಡ್ಕರ್ ಅವರು ಪ್ರತಿಕ್ರಿಯಿಸುತ್ತಾ, ನಮ್ಮ ರಾಜ್ಯ ನಿರ್ದೇಶಕ ತತ್ವಗಳಲ್ಲಿರುವ ಎಲ್ಲಾ ಅಂಶಗಳು ಸಮಾಜವಾದಿ ಸಿದ್ಧಾಂತಗಳೇ ಆಗಿವೆ. ಇದಕ್ಕಿಂತ ಮಿಗಿಲಾದ ಸಮಾಜವಾದ ಯಾವುದೆಂದು ನನಗೆ ಅರ್ಥವಾಗುತ್ತಿಲ್ಲ. ಜೊತೆಗೆ ಜನಪ್ರಿಯ ಸಮಾಜವಾದದ ಸಿದ್ಧಾಂತಗಳನ್ನು ನಮ್ಮ ಸಂವಿಧಾನದಲ್ಲಿ ಅಳವಡಿಸಿದ್ದೇವೆ ಎಂದರು. ಈ ಉತ್ತರ ಕೆ.ಟಿ. ಷಾ ಅವರಿಗೆ ತೃಪ್ತಿಯನ್ನು ಹೊಂದಿದ್ದರಿಂದ ಅವರು ಮರುಪ್ರಶ್ನೆಯನ್ನು ಎತ್ತಲಿಲ್ಲ. ಹಾಗಾಗಿಯೇ ಪ್ರಸ್ತುತ ಸಂವಿಧಾನದಲ್ಲಿ ಸಮಾಜವಾದಿ ತತ್ವಗಳು ನೆಲೆಗೂಂಡಿರುತ್ತವೆ.

ಅಂಬೇಡ್ಕರ್ ಅವರು ಸಂವಿಧಾನ ರಚನೆಯಲ್ಲಿ ಮಾಡಿರುವ ಸಾಧನೆ ಹಾಗೂ ಕೊಡುಗೆಗಳ ಬಗೆಗೆ ಕಾನೂನು ಪಂಡಿತರು, ಸಂಸತ್ತಿನ ಬಹುತೇಕ ಸದಸ್ಯರು, ರಾಜನೀತಿ ನಿಪುಣರು, ಪಾಶ್ಚಾತ್ಯ ರಾಜ್ಯನೀತಿ ಶಾಸ್ತ್ರಜ್ಞರೆಲ್ಲರೂ ಅಂಬೇಡ್ಕರ್ ಅವರನ್ನು ಸಂವಿಧಾನದ ಶಿಲ್ಪಿಗಳೆಂದು ಮೆಚ್ಚಿ ಧೃಡಪಡಿಸಿರುವುದನ್ನು ಅಂಬೇಡ್ಕರ್ ಅವರನ್ನು ಟೀಕಿಸುವ ಹಾಗೂ ಅವರ ಕೊಡುಗೆ ಏನು ಇಲ್ಲ ಎಂತಹ ಇವತ್ತಿನ ಮಡಿವಂತಿಕೆಯ ಮನಸ್ಸುಗಳು ಇಂತಹ ಮಹಾಶಯರ ಅಭಿಪ್ರಾಯಗಳು, ಹೇಳಿಕೆಗಳು ಹಾಗೂ ಅವರ ಬರವಣಿಗೆಗಳನ್ನು ಅಧ್ಯಯನ ಮಾಡುವುದು ಸೂಕ್ತ.

ಅಂಬೇಡ್ಕರ್ ಅವರು "1950ನೇ ಜನವರಿ 26 ರಂದು ಸಂಸತ್ತಿನಲ್ಲಿ ಭಾರತದಲ್ಲಿ ನಾವಿಂದು ಒಂದು ಗೊಂದಲಮಯವಾದ ಹೊಸದೊಂದು ಯುಗಕ್ಕೆ ಕಾಲಿಡುತ್ತಿದ್ದೇವೆ. ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಗಳು ಹಾಗೆಯೇ ಉಳಿದಿವೆ. ಮುಂಬರುವ ಸ್ವತಂತ್ರ ಸರಕಾರ ನನ್ನ ಸಂವಿಧಾನವನ್ನು ಯಥಾವತ್ತಾಗಿ ಜಾರಿ ಮಾಡಿದರೆ, ಇನ್ನು ಕೇವಲ 20 ವರ್ಷಗಳಲ್ಲಿ ಭಾರತವು ಪ್ರಭುದ್ಧ ಭಾರತ ಆಗುತ್ತದೆ. ಅಷ್ಟೇ ಅಲ್ಲ, ಆರ್ಥಿಕ ಮತ್ತು ಸಾಮಾಜಿಕ ಸಮಾನತೆಗಳು ಸ್ಥಾಪನೆಯಾಗುತ್ತದೆ"[2] ಎಂದರು. ಅಂದರೆ

[1] ಡಾ. ಐ.ಎಸ್. ವಿದ್ಯಾಸಾಗರ್ (2005) ಅಂಬೇಡ್ಕರ್ ಮತ್ತು ಮಾನವೀಯ ಮೌಲ್ಯಗಳು, ಸುಮೇಧ ಪ್ರಕಾಶನ, ಗುಲ್ಬರ್ಗಾ, ಪುಟ-139

[2] Constituent Assembly Debates (1948) Vol.XII, P.No.896

ಅಂಬೇಡ್ಕರ್ ಅವರ ನೇತೃತ್ವದಲ್ಲಿ ರಚಿತಗೊಂಡಿರುವ ಸಂವಿಧಾನದಿಂದ ಮಾತ್ರ ಈ ಕ್ಷೇತ್ರಗಳಲ್ಲಿ ಸಮಾನತೆ ತರಲು ಸಾಧ್ಯ. ಏಕೆಂದರೆ, ಇದರಲ್ಲಿ ಭಾರತದ ಸಮಸ್ತರು ಸುಖಿಗಳಾಗಿ ಬದುಕನ್ನು ಸಾಗಿಸಬಹುದು. ಆದರೆ ಇದನ್ನು ಅನುಷ್ಠಾನಗೊಳಿಸುವ ಜಾಗದಲ್ಲಿ ಇದರ ವಿರೋಧಿಗಳು ಹಾಗೂ ಸಮಾಜ ಘಾತುಕರುಗಳೇ ಕುಳಿತಿದ್ದಾರೆ ಎಂದು ಆತಂಕದ ಮಾತನ್ನು ವ್ಯಕ್ತಪಡಿಸಿದ್ದಾರೆ.

ಇದು ಆಧುನಿಕ ಸಂವಿಧಾನಾತ್ಮಕ ಸರಕಾರದ ಅತ್ಯಂತ ನೂತನವೂ ಹಾಗೂ ವಿಶಿಷ್ಟವೂ ಆದಂತಹ ಒಂದು ಲಕ್ಷಣವನ್ನು ಒಳಗೊಂಡಿದೆ. ಏಕೆಂದರೆ, ಐರಿಷ್ ಗಣರಾಜ್ಯದ ಸಂವಿಧಾನದಿಂದ ಸಂವಿಧಾನದ ರಚನಾಕಾರರು ಪ್ರಭಾವಿತರಾಗಿರುತ್ತಾರೆ. ಆ ಕಾರಣವಾಗಿ ಅಲ್ಲಿನ ಸಂವಿಧಾನದಲ್ಲಿ **'ಸಮಾಜ ನೀತಿಯ ನಿರ್ದೇಶಕ ತತ್ತ್ವಗಳು'** ಎಂಬ ಒಂದು ಅಧ್ಯಾಯವಿದೆ. ಅದರಲ್ಲಿ ಐರಿಷ್ ಜನತೆಯೂ ಇದನ್ನು ಸ್ಪೆಯಿನ್ ಗಣರಾಜ್ಯದ ಸಂವಿಧಾನದಿಂದ ತೆಗೆದುಕೊಂಡಿರುತ್ತಾರೆ. ಸ್ಪೆಯಿನ್ ಗಣರಾಜ್ಯವೇ ಮೊಟ್ಟ ಮೊದಲ ಬಾರಿಗೆ ಅಂತಹ ತತ್ತ್ವಗಳನ್ನು ಸಂವಿಧಾನದ ಒಂದು ಭಾಗವಾಗಿ ಅಳವಡಿಸಿಕೊಂಡಿರುತ್ತದೆ. ಆದರೆ, ಇಂತಹ ತತ್ತ್ವಗಳ ಭಾವನೆಯನ್ನು ಫ್ರಾನ್ಸ್‌ನ ಮಾನವ ಹಕ್ಕುಗಳ ಘೋಷಣೆಯಲ್ಲಿ ಹಾಗೂ ಅಮೆರಿಕದ ವಸಾಹತುಗಳು ಸ್ವಾತಂತ್ರ್ಯವನ್ನು ಘೋಷಿಸಿದುದ್ದರಲ್ಲಿ ಕಾಣಬಹುದಾಗಿದೆ. ಈ ಘೋಷಣೆಗಳ ಪ್ರಭಾವದಿಂದಾಗಿ ಯೂರೋಪ್ ಮತ್ತು ಅಮೇರಿಕಾದಲ್ಲಿನ ಜನತೆಯ ಮೇಲೆ ಅಗಾಧವಾದ ಪರಿಣಾಮವನ್ನು ಉಂಟು ಮಾಡಿರುವುದು ಚಾರಿತ್ರಿಕ ಸತ್ಯ. ಹಾಗಾಗಿಯೇ ಇವು ಒಂದು ಕಡೆ ಎಲ್ಲ ಬಗೆಯ ರಾಜಕೀಯ ನಿರಂಕುಶತೆಯನ್ನು ಬುಡಮೇಲು ಮಾಡುವ ಸಂಘಟಿತ ಪ್ರಯತ್ನಗಳಿಗೆ ಸ್ಫೂರ್ತಿಯನ್ನು ಉಂಟುಮಾಡಿ, ಮತ್ತೊಂದು ಕಡೆ, ಆ ದಿನಗಳಲ್ಲಿ ಸಹಜ ಎಂದು ಭಾವಿಸಲಾಗಿದ್ದ ಎಷ್ಟೋ ಸಮಾಜ ವಿರೋಧಿ ಆಚರಣೆಗಳ ನಿರ್ಮೂಲನಕ್ಕೆ ಸರ್ಕಾರವು ಸಕಲ ಪ್ರಯತ್ನಗಳನ್ನು ಕೈಗೊಳ್ಳುವಂತೆ ಒತ್ತಾಯ ಪಡಿಸಿದ್ದಾರೆ.

ಭಾರತದಲ್ಲಿ ಇಂತದೊಂದು ಪ್ರಗತಿದಾಯಕ ವಿಚಾರಕ್ಕೆ 1935ರ ಭಾರತ ಸರ್ಕಾರ ಕಾಯಿದೆಯೂ ಕೂಡ ರಾಜ್ಯನೀತಿ ನಿರ್ದೇಶಕ ತತ್ವಗಳಿಗೆ ಅವಕಾಶವನ್ನು ಒದಗಿಸಿಕೊಟ್ಟಿರುತ್ತದೆ. ಇದು ಬಹಳ ಫಲಪ್ರದವಾದ ವಿಚಾರವಾಗಿತ್ತು. ಅಂಬೇಡ್ಕರ್ ಅವರು "ನಿರ್ದೇಶಕ ತತ್ತ್ವಗಳು ಹೇಗಿವೆಯೆಂದರೆ, 1935ರ ಭಾರತ ಸರ್ಕಾರದ ಕಾಯಿದೆಯ ಪ್ರಕಾರ ಬ್ರಿಟಿಷ್ ಸರ್ಕಾರ ಗವರ್ನರ್ ಜನರಲ್, ಕಾಲೋನಿಗಳ ಗವರ್ನರ್ ಮತ್ತು ಭಾರತದಲ್ಲಿದ್ದವರಿಗೆ ನೀಡಿದ ಶಾಸನಗಳ ರೀತಿಯಲ್ಲಿಯೇ ಇವೆ. ಆದ್ದರಿಂದ, **'ನಿರ್ದೇಶಕ ತತ್ತ್ವಗಳು'** ಎಂಬುದು ಶಾಸನಗಳಿಗೆ ಕೇವಲ ಇನ್ನೊಂದು ಹೆಸರು ಅಷ್ಟೇ. ಇದರಲ್ಲಿ ಒಂದು ವ್ಯತ್ಯಾಸವೆಂದರೆ; ಅವು ಶಾಸನ ಸಭೆಗಳು ಮತ್ತು ಕಾರ್ಯಾಂಗಕ್ಕೆ ನೀಡಿದ ಆದೇಶಗಳು. ಅಧಿಕಾರವನ್ನು ಯಾವನು

ಆಕ್ರಮಿಸಿಕೊಳ್ಳುತ್ತಾನೆಯೋ ಆತನಿಗೆ ಅದರಲ್ಲಿ ತನಗೆ ಹೇಗೆ ಬೇಕೋ ಹಾಗೇ ವರ್ತಿಸಲು ಸ್ವಾತಂತ್ರ್ಯವಿಲ್ಲ. ಅಧಿಕಾರವನ್ನು ಚಲಾಯಿಸುವುದರಲ್ಲಿ ನಿರ್ದೇಶಕ ತತ್ತ್ವಗಳು ಎಂದು ಕರೆಯುವ ಈ ಆದೇಶ ಶಾಸನಗಳನ್ನು ಗೌರವಿಸಲೇಬೇಕು. ಅವುಗಳನ್ನು ಅವನು ಅಲಕ್ಷಿಸುವ ಆಗಿಲ್ಲ"[3] ಎಂಬ ಒಂದು ಸೂಚನೆಯನ್ನು ಅಂದೇ ನೀಡಿದ್ದರು. ಅಂದರೆ ಇದು ಒಂದು ಭಾರತದಲ್ಲಿನ ಜನತೆಗೆ ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಒಂದು ರೀತಿಯ ಆರ್ಥಿಕ ಭದ್ರತೆಗೆ ಪೂರಕ ವಿಚಾರ ಇದಾಗಿದೆ. ಅಂದರೆ, ಭಾರತದ ಜನತೆಯಲ್ಲಿ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣ ಚಿಂತನೆಗೆ ಈ ಕಾಯಿದೆ ಒಂದು ರೀತಿಯಲ್ಲಿ ಆಶಯವಾಗಿತ್ತು ಅಂದರೆ, ಶಾಸಕಾಂಗ ರಚಿಸಲು ಒಂದು ಕಾನೂನು ಎನ್ನುವುದಕ್ಕಿಂತ ಅದೊಂದು ನೀತಿ ಆಗಿತ್ತು.

ಸಂವಿಧಾನವು ಮೂಲಭೂತ ಹಕ್ಕುಗಳ ಜೊತೆಗೆ ರಾಜ್ಯ ನೀತಿಯು ಕೆಲವು ನಿರ್ದೇಶಕ ತತ್ತ್ವಗಳನ್ನು ಒಳಗೊಂಡಿರಬೇಕು ಎಂಬ ನಿರ್ಣಯಕ್ಕೆ ಸಂವಿಧಾನ ರಚನಾ ಸಭೆಯು ಬಂದಿರುತ್ತದೆ. ಇದು ಒಂದು ರಾಷ್ಟ್ರದ ಆಡಳಿತ ವಿಚಾರದಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. ಏಕೆಂದರೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಳುವ ಪಕ್ಷವು ತನ್ನ ಇಚ್ಛೆಯಂತೆ ಆಡಳಿತ ಮಾಡುವುದರ ಬದಲಿಗೆ ನಿರ್ದೇಶಕ ತತ್ವಗಳ ಆದೇಶಗಳಿಗೆ ಬದ್ಧವಾಗಿ ಆಡಳಿತವನ್ನು ನಡೆಸಬೇಕು. ಅವುಗಳನ್ನು ಅಲಕ್ಷಿಸುವಂತಿಲ್ಲ ಅವುಗಳ ಉಲ್ಲಂಘನೆಗೆ ನ್ಯಾಯಲಯದಲ್ಲಿ ಪ್ರಶ್ನಿಸಲು ಸಾಧ್ಯವಿಲ್ಲ. ಹೀಗೆ ಇದ್ದರೂ ಕೂಡ ಆಡಳಿತ ಪಕ್ಷವು ಚುನಾವಣೆ ಸಮಯದಲ್ಲಿ ಮತದಾರ ವರ್ಗದವರಿಗೆ ಉತ್ತರ ನೀಡಬೇಕಾಗುತ್ತದೆ. ಆದ್ದರಿಂದಲೇ, ಅಂಬೇಡ್ಕರ್ ಅವರು ಈ ರಾಜ್ಯನೀತಿ ನಿರ್ದೇಶಕ ತತ್ವಗಳ ಮಹತ್ತ್ವಪೂರ್ಣವಾದ ಉದ್ದೇಶವನ್ನು ಕುರಿತು ಸಂವಿಧಾನ ರಚನಾ ಸಭೆಯಲ್ಲಿ "ಸಂವಿಧಾನದ ಈ ಭಾಗವನ್ನು ವಿಧಿಬದ್ಧಗೊಳಿಸುವಲ್ಲಿ ಸಂವಿಧಾನ ರಚನಾ ಸಭೆಯು ಮುಂದಿನ ಶಾಸನ ಸಭೆಗೆ ಮತ್ತು ಕಾರ್ಯಾಂಗಕ್ಕೆ ಅವರು ಪಡೆದಿರುವ ಶಾಸಕಾಂಗ ಮತ್ತು ಕಾರ್ಯಾಂಗದ ಅಧಿಕಾರಗಳನ್ನು ಯಾವ ವಿಧಾನದಿಂದ ಚಲಾಯಿಸಬೇಕು ಎಂದು ತೋರಿಸುವುದಕ್ಕೆ ಕೆಲವು ನಿರ್ದೇಶನಗಳನ್ನು ಕೊಡುತ್ತಿವೆ. ಈ ಭಾಗದಲ್ಲಿನ ತತ್ತ್ವಗಳನ್ನು ಕೇವಲ ಪವಿತ್ರ ಘೋಷಣೆಗಳಾಗಿ ಸೇರಿಸುವ ಉದ್ದೇಶವೂ ನಮಗಿಲ್ಲ. ಈ ಸಭೆಯ ಪ್ರಮುಖ ಉದ್ದೇಶವು ಇನ್ನು ಮುಂದೆ ಶಾಸನ ಸಭೆ ಮತ್ತು ಕಾರ್ಯಾಂಗಗಳೆರಡೂ ಈ ತತ್ತ್ವಗಳಿಗೆ ಕೇವಲ ಮಾತಿನ ಮಹತ್ತ್ವವನ್ನು ಕೊಡದೇ, ಅವುಗಳನ್ನು ಇನ್ನೂ ಮುಂದೆ ರಾಷ್ಟ್ರಾಡಳಿತದ ವಿಷಯಗಳಲ್ಲಿ ಕೈಗೊಳ್ಳುವ ಎಲ್ಲ ಶಾಸಕಾಂಗ ಮತ್ತು ಕಾರ್ಯಾಂಗದ ಚಟುವಟಿಕೆಗಳು ಆಧಾರವಾಗಿ ಮಾಡಬೇಕು ಎನ್ನುವುದು"[4] ಅವರ ಅಭಿಪ್ರಾಯವಾಗಿರುತ್ತದೆ. ಅಂದರೆ,

[3] Constituent Assembly Debates (1948) Vol.VII, P.No.41
[4] Ibid P.No.476

ಇವುಗಳನ್ನು ಚಾಲ್ತಿಗೆ ತರುವಲ್ಲಿ ಶಾಸಕಾಂಗ ಮತ್ತು ಕಾರ್ಯಾಂಗಗಳು ಯಾವ ಬಗೆಯ ಜವಾಬ್ದಾರಿಯನ್ನು ಹೊಂದಿರಬೇಕು ಹಾಗೇ ಆ ಜವಬ್ದಾರಿಯನ್ನು ಯಾವ ರೀತಿ ನಿರ್ವಹಿಸಬೇಕು ಎಂದು ಹೇಳಿದೆ. ಹಾಗೆಯೇ ಶಾಸಕಾಂಗವು ಶಾಸನವನ್ನು ಮಾಡುತ್ತದೆ. ಆದರೆ ಆ ಶಾಸನಗಳನ್ನು ಜಾರಿಗೆ ತರುವ ಜವಬ್ದಾರಿ ಕಾರ್ಯಾಂಗಕ್ಕೆ ಇರುತ್ತದೆ. ಆದ್ದರಿಂದ ಇದನ್ನು ಕಾರ್ಯಾಂಗವು ಚಾಚು ತಪ್ಪದೇ ಅನುಷ್ಠಾನಗೊಳಿಸಿದರೆ ದೇಶದಲ್ಲಿ ಜನತೆ ಆರ್ಥಿಕ ಸಬಲೀಕರಣ ಹೊಂದಲು ಇದು ಸಹಾಯಕವಾಗುತ್ತದೆ.

ಭಾರತ ಸಂವಿಧಾನದ 4ನೇ ಭಾಗದಲ್ಲಿ ರಾಜ್ಯ ನೀತಿ ನಿರ್ದೇಶಕ ತತ್ತ್ವಗಳನ್ನು ಕುರಿತಾಗಿ 36ನೇ ವಿಧಿಯಿಂದ 51ನೇ ವಿಧಿಯ ವರೆಗೆ 16ನ್ನು ವಿಧಿಗಳನ್ನು ಅಳವಡಿಸಲಾಗಿರುತ್ತದೆ. ಅವುಗಳು ಆರ್ಥಿಕ, ಸಾಮಾಜಿಕ, ನ್ಯಾಯಾಂಗ, ಶಿಕ್ಷಣ, ಆಡಳಿತ, ಸಾಂಸ್ಕೃತಿಕ ಮತ್ತು ಅಂತರರಾಷ್ಟ್ರೀಯ ಸಮಸ್ಯೆಗಳೆಲ್ಲವನ್ನು ಒಳಗೊಳ್ಳುವಂತಹ ಸರಕಾರೀ ಚಟುವಟಿಕೆಯ ಬಹುವಿಶಾಲವಾದ ಶ್ರೇಣಿಯನ್ನು ಇವುಗಳು ಒಳಗೊಳ್ಳುತ್ತವೆ. ಈ ನೀತಿಗಳನ್ನು ಆಡಳಿತ ಮತ್ತು ಶಾಸನ ಕಾನೂನುಗಳ ರಚನೆಯಲ್ಲಿಯೂ ಸಹ ಇವುಗಳನ್ನು ಅನುಸರಿಸುವುದು ಸರ್ಕಾರದ ಆದ್ಯಕರ್ತವ್ಯವಾಗಿರುತ್ತದೆ. ಹಾಗಾಗಿ ಗಣರಾಜ್ಯದ ಸಂವಿಧಾನದಲ್ಲಿ ಈ ಧ್ಯೇಯೋದ್ದೇಶಗಳನ್ನು ಒಳಗೊಂಡಿರುತ್ತದೆ. ಇದರ ಪೀಠಿಕೆಯಲ್ಲಿ ಪ್ರತಿಜ್ಞೆ ಮಾಡಿರುವಂತೆ ಆರ್ಥಿಕ ಮತ್ತು ಸಾಮಾಜಿಕ ಪ್ರಜಾಪ್ರಭುತ್ವವನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿದೆ.

ಈ ರಾಜ್ಯ ನೀತಿ ನಿರ್ದೇಶಕ ತತ್ವಗಳ ವಿಚಾರಗಳು ಸಂವಿಧಾನ ರಚನಾ ಸಭೆಯಲ್ಲಿ ಚರ್ಚೆಗೆ ಬಂದಾಗ, ಎಚ್.ವಿ.ಕಾಮತ್, ನಜೀರುದ್ದಿನ್ ಅಹ್ಮದ್ ಮೋಹನ್‌ಲಾಲ ಗೌತಮ, ಎಲ್. ಕೃಷ್ಣಸ್ವಾಮಿ ಭಾರತಿ, ಹುಸೇನ್ ಇಮಾಮ್, ರಾಜ್ ಬಹದ್ದೂರ್, ಬ್ರಜೇಶ್ವರ ಪ್ರಸಾದ್, ಕೆ. ಸಂತಾನಂ ಶಾಮನಂದನ, ಸಹಾಯ್, ಎಸ್. ನಾಗಪ್ಪ, ಟಿ.ಎ. ರಾಮಲಿಂಗಮ್ ಚೆಟ್ಟಿಯಾರ್, ಅನಂತಶಯನಂ, ಅಯ್ಯಂಗಾರ್ ಮಹಾವೀರತ್ಯಾಗಿ, ಆಮಿಯೇ ಕುದೂರ ಘೋಷ್, ಇನ್ನು ಮುಂತಾದ ಸದಸ್ಯರು ಸಕ್ರಿಯವಾಗಿ ಭಾಗವಹಿಸಿ ಈ ನೀತಿ ನಿರ್ದೇಶನ ರಾಜ್ಯಕ್ಕೆ ಒಂದು ರೂಪವನ್ನು ಕೊಡಲು ಸಹಕರಿಸಿರುತ್ತಾರೆ. ಅಂದರೆ, ಕರಡು ರಚನಾ ಸಮಿತಿಯ ಅಧ್ಯಕ್ಷರಾದ ಅಂಬೇಡ್ಕರ್ ಅವರಿಂದ ಮಂಡಿತವಾದ ಕರಡಿನ ಮೇಲೆ ಚರ್ಚಿಸುತ್ತಿದ್ದರು. ಇವರು ಕೇಳಿರುವ ಪ್ರಶ್ನೆಗಳು, ಸಮರ್ಥನೆಗಳು ಹಾಗೂ ಟೀಕೆಗಳಿಗೆ ಅಂಬೇಡ್ಕರ್ ಅವರು ಸಮರ್ಪಕವಾದ ಉತ್ತರಗಳನ್ನು ಕೊಡುವ ಮೂಲಕ ಇದನ್ನು ಸಂವಿಧಾನದ 4ನೇ ಭಾಗದಲ್ಲಿ ಒಳವಡಿಸಲು ಕಾರಣಕರ್ತರಾಗಿರುತ್ತಾರೆ. ಅಂಬೇಡ್ಕರ್ ಅವರು ಭಾರತದಲ್ಲಿ ಆರ್ಥಿಕ ಹಾಗೂ ಸಾಮಾಜಿಕ ಸಮಾನತೆಯನ್ನು ತರಲು ಈ ರಾಜ್ಯ ನೀತಿ ನಿರ್ದೇಶಕ ತತ್ವಗಳ ಮಹತ್ವವನ್ನು ಚರ್ಚಿಸಿದ್ದಾರೆ. ಈ ವಿಚಾರವಾಗಿ ಕರಡು ಸಂವಿಧಾನಕ್ಕೆ ಅನುಸಾರವಾಗಿ ಈ ನೀತಿ ನಿರ್ದೇಶನಗಳನ್ನು ಅನುಷ್ಠಾನಕ್ಕೆ ತರಲು

ಯಾರು ಆಸಕ್ತಿ ಉಳ್ಳವರಾಗಿರುತ್ತಾರೋ, ಅಂತಹವರಿಗೆ ಈ ಸಂವಿಧಾನವು ಅವುಗಳನ್ನು ಜಾರಿಗೆ ತರಲು ಅವಕಾಶಗಳನ್ನು ನೀಡುತ್ತದೆ ಎಂಬುದಕ್ಕೆ ಇದು ಪೂರಕವಾಗಿರುತ್ತದೆ.

ಅಂಬೇಡ್ಕರ್ ಅವರು ಮತ್ತು ಇತರ ಸಂವಿಧಾನ ರಚನಾ ಸಭೆಯ ಸದಸ್ಯರು ಭಾರತಕ್ಕೆ ಒಂದು ನೂತನವಾದ ಸಂವಿಧಾನವನ್ನು ರಚಿಸುವಾಗ, "ರಾಜ್ಯ ರಾಜಕೀಯ ಪ್ರಜಾಪ್ರಭುತ್ವ ಮತ್ತು ಆರ್ಥಿಕ ಪ್ರಜಾಪ್ರಭುತ್ವ"[5] ಎಂಬ ಈ ಎರಡು ಮಹತ್ವ ಉದ್ದೇಶಗಳನ್ನು ಹೊಂದಿದ್ದರು. ಹಾಗೆಯೇ ಅಧಿಕಾರಕ್ಕೆ ಬರುವ ಎಲ್ಲಾ ಸರ್ಕಾರಗಳು ಇವುಗಳನ್ನು ಅನುಷ್ಠಾನಕ್ಕೆ ತರುವಂತೆ ಮಾಡಲು ಹಾಗೂ ಇವರು ಇದರ ಅನುಷ್ಠಾನಕ್ಕೆ ಶ್ರಮಿಸಬೇಕು ಎಂಬ ಆಶಯವನ್ನು ಹೊಂದಿದ್ದು ಇವುಗಳನ್ನು ಸಂವಿಧಾನದಲ್ಲಿ ಅಳವಡಿಸಿರುವುದನ್ನು ಕಾಣಬಹುದು.

ಈ ರಾಜ್ಯನೀತಿ ನಿರ್ದೇಶನ ತತ್ವ ಸಂಬಂಧಿಸಿದಂತೆ ಕೆಲವು ವಿಚಾರಗಳನ್ನು ಸೇರ್ಪಡೆಗೊಳಪಡಿಸುವ ಸಲುವಾಗಿ ಚರ್ಚೆಗಳನ್ನು ನಡೆಯುತ್ತಿರುತ್ತದೆ. ಇಂತಹ ಚರ್ಚೆಯಲ್ಲಿ ಸಕ್ರಿಯವಾಗಿರುವ ಎಚ್.ವಿ. ಕಾಮತ್ ಅವರು "ಭಾರತದಲ್ಲಿ ಒಂದು ಹೊಸ ರಾಜಕೀಯ ಮತ್ತು ಆರ್ಥಿಕ ಮಾದರಿಯನ್ನು ರಚಿಸಲು ಮತ್ತು ಮಹಾತ್ಮಾಗಾಂಧೀಯವರ ಕನಸು ಕಂಡ ಪಂಚಾಯತ್ ರಾಜ್ಯವನ್ನು ನನಸಾಗಿಸಲು ಸಮರ್ಥರಾಗಬಹುದು. ಇಂಥ ವಿಕೇಂದ್ರೀಕರಣದ ಸಮಾಜವಾದದ ಮೂಲಕ ಮಾನವಕುಲವನ್ನು ಮತ್ತು ಈ ಜಗತ್ತನ್ನು ಶಾಂತಿ ಮತ್ತು ಸಂತೋಷದ ಉದ್ದೇಶಗಳಿಗೆ ಕೊಂಡಯ್ಯಬಹುದು" [6] ಎಂದಿದ್ದಾರೆ. ಅಂದರೆ, ಪ್ರಸ್ತುತ ಚರ್ಚಿತ ಭಾಗದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸೇರ್ಪಡೆಗೊಳಿಸಿ ಆ ಮೂಲಕ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೂ ಸಹಾಯಕವಾಗುತ್ತದೆ ಎಂಬುದೇ ಆಗುತ್ತದೆ. ಇದು ಗಾಂಧೀಜಿ ಅವರು ಕಂಡಿದ್ದ ಕನಸು. ಇದನ್ನು ಈ ಸದಸ್ಯರು ನನಸು ಮಾಡಲು ಚರ್ಚೆಯನ್ನು ಎತ್ತಿರುತ್ತಾರೆ. ಹಾಗೆಯೇ ಈ ಮೂಲಕ ಸಮಾಜವಾದವನ್ನು ಅನುಷ್ಠಾನಕ್ಕೆ ತಂದು ಗ್ರಾಮೀಣ ಜನರನ್ನು ಆರ್ಥಿಕ ಸಬಲರನ್ನಾಗಿ ಮಾಡುವ ಗುರಿ ಇವರದಾಗಿರುತ್ತದೆ. ಹಾಗೆಯೇ ಇದನ್ನು ಆಳವಡಿಸಿಕೊಳ್ಳುವ ಮೂಲಕ ಇಲ್ಲಿ ಎಲ್ಲರೂ ಕೂಡ ಸುಖೀಗಳಾಗಿ ಬದುಕುವ ವಾತಾವರಣವನ್ನು ಸೃಷ್ಟಿಸುವುದೇ ಆಗಿರುತ್ತದೆ. ಹಾಗಾಗಿಯೇ ಇದರಿಂದ ರಾಷ್ಟ್ರವು ಪ್ರಗತಿದಾಯಕವಾಗಿರುತ್ತದೆ

ಹೀಗೆ ಗಾಂಧೀಜಿ ಅವರ ತತ್ವವನ್ನು ಪಾಲಿಸಿದಾಗ ಸರ್ಕಾರವು ಗ್ರಾಮೀಣ ಪ್ರದೇಶಗಳಲ್ಲಿ ಗುಡಿಕೈಗಾರಿಕೆಗಳನ್ನು, ಸಹಕಾರಿ ಕ್ಷೇತ್ರದ ಅಡಿಯಲ್ಲಿ ತಂದು ಈ ಮೂಲಕವಾಗಿಯೂ ಕೂಡ

---

[5] ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಬೆಂಗಳೂರು, (2013) ಸಂಪುಟ.12, ಭಾಗ.2, ಪುಟ.37

[6] ಅದೇ, ಪುಟ.39

ಜನಸಾಮಾನ್ಯರನ್ನು ಆರ್ಥಿಕ ಸಬಲೀಕರಣಕ್ಕೆ ಕರೆದುಕೊಂಡು ಹೋಗಿ, ರಾಷ್ಟ್ರದಲ್ಲಿನ ಅಭಿವೃದ್ಧಿಗೆ ಸಹಕಾರಿಯಾಗುವುದೇ ಆಗಿರುತ್ತದೆ. ಹಾಗಾಗಿ ಇದರ ವ್ಯಾಪ್ತಿಯಲ್ಲಿ ಕೃಷಿಕಾರ್ಮಿಕರ, ಔದ್ಯೋಗಿಕ ಕಾರ್ಮಿಕರೂ ಬರುತ್ತಾರೆ. ಅವರಿಗೆ ಕೂಡ ಇದರ ಮೂಲಕ ಸಹಕಾರದೊರೆತ್ತಿವೆ. ತಮ್ಮ ಬದುಕನ್ನು ಪರಿವರ್ತಿಸಿಕೊಳ್ಳಲುಬಹುದು. ಇಂತಹ ಜನಸಮುದಾಯವು ಕೆಲಸ ಕಾರ್ಯಗಳನ್ನು ಮಾಡುವಾಗ ಕೆಲವು ರೋಗ ರುಜಿನಗಳು ಹರಡಿ ಅನಾರೋಗ್ಯಕ್ಕೆ ತುತ್ತಾಗಬಹುದು. ಆವಾಗ ಇವರ ಆರೋಗ್ಯದ ಬಗೆಗೆ ಸರ್ಕಾರವೇ ಮುಂದೆ ಬಂದು ಅವರಿಗೆ ಚಿಕಿತ್ಸೆಯನ್ನು ಕೊಡಿಸುವಂತೆ ಇಲ್ಲಿ ಸೂಚಿಸಲಾಗಿದೆ.

ಹಾಗೆಯೇ ಈ ಸಂದರ್ಭದಲ್ಲಿ 14 ವರ್ಷದ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣಕೊಡಿಸಬೇಕು ಎಂಬುದು ಕೂಡ ಚರ್ಚಿತಗೊಂಡು ನಂತರದಲ್ಲಿ ಇದರ ಪರ ವಿರೋಧಕ್ಕೆ ನಡೆದು ನಂತರದಲ್ಲಿ 14 ವರ್ಷದ ಮಕ್ಕಳಿಗೆ ಶಿಕ್ಷಣ ಸಂಸ್ಥೆಗಳಿಗೆ ಸೇರ್ಪಡೆಗೊಳಸದೇ ಹೋದರೆ, ಆ ಮಕ್ಕಳು ಇತರೆ ಯಾವುದಾದರೂ ಕೆಲಸಗಳಲ್ಲಿ ತೊಡಗಿಸಿಕೊಳ್ಳಬಹುದು. ಹಾಗಾಗಿ ಇದನ್ನು ನಿಷೇಧಿಸಲಾಗಿರುತ್ತದೆ. ಆದ್ದರಿಂದ 14 ವರ್ಷದ ಮಕ್ಕಳಿಗೆ ಉಚಿತ ಶಿಕ್ಷಣ ನೀಡಿ, ಅವರು ಶಿಕ್ಷಣದಲ್ಲಿ ತೊಡಗಲೇಬೇಕು ಎಂಬ ನಿರ್ಧಾರಕ್ಕೆ ಬರಲಾಗಿದೆ.

ಅಂಬೇಡ್ಕರ್ ಅವರು "ರಾಷ್ಟ್ರಕ್ಕೊಂದು ಏಕಮಾತ್ರ ನಾಗರಿಕ ಸಂಹಿತೆ (ಊಣಾಃ ಅಙಜಜ) ಹೊಂದಿರಬೇಕೋ ಅಥವಾ ಹೊಂದಿರಬಾರದೋ"[7] ಎಂಬ ವಿಚಾರವನ್ನು ಚರ್ಚೆಗೆ ತಂದಿರುತ್ತಾರೆ. ಈ ಚರ್ಚೆಯ ಸಂದರ್ಭದಲ್ಲಿ ಅಂಬೇಡ್ಕರ್ ಅವರು ಈ ದೇಶದಲ್ಲಿರುವ ಎಲ್ಲಾ ನಾಗರಿಕರು ಅನುಸರಿಸುವ ಅವರ ಧರ್ಮವನ್ನು ಗಣನೆಗೆತೆಗೆದುಕೊಳ್ಳದೇ ಎಲ್ಲರಿಗೂ ಅನ್ವಯ ಆಗುವಂತಹ ಒಂದು ಏಕರೂಪವಾದ ನಾಗರಿಕ ಸಂಹಿತೆಯನ್ನು ರೂಪಿಸುವಾಗ, ಭಾರತದಲ್ಲಿ ಹಿಂದೆ ಚಾಲ್ತಿಗೆ ಬಂದಿದ್ದ ಹಿಂದೂ ಕಾನೂನಿನ ಕೆಲವು ಭಾಗಗಳನ್ನು ಕೂಡ ಚರ್ಚೆಗೆ ಒಳಪಡಿಸಿರುತ್ತಾರೆ. ಇದು ಚರ್ಚಿತಗೊಂಡರು ತದನಂತರದಲ್ಲಿ ಎಲ್ಲಾ ಸದಸ್ಯರೂ ಒಮ್ಮತವನ್ನು ಸೂಚಿಸಿರುತ್ತಾರೆ. ಹಾಗಾಗಿಯೇ ರಾಷ್ಟ್ರಕ್ಕೊಂದು ಏಕರೂಪವಾಗಿ ಕಾನೂನು ಇರಬೇಕೆಂದು ಅಂಬೇಡ್ಕರ್ ಅವರ ಆಶಯವೂ ಇಡೇರಿದಂತೆ ಆಗುತ್ತದೆ. ಅಂದರೆ, ಬೇರೆ ಬೇರೆ ಕಾನೂನನ್ನು ಜಾರಿಗೆ ತರರುವುದರಿಂದ ದಮನಿತ ಸಮುದಾಯಗಳ ಮೇಲೆ ಇವುಗಳನ್ನು ಹೇರಿ ಮತ್ತಷ್ಟು ಅವರು ದಮನಕ್ಕೆ ಒಳಗಾಗಬಹುದು ಎಂಬ ಆಲೋಚನೆಯಿಂದ ಏಕರೂಪ ಕಾನೂನನ್ನು ಪ್ರತಿಪಾದಿಸಿರುವುದು ಕಂಡುಬರುತ್ತದೆ.

ಈ ನೀತಿ ನಿರ್ದೇಶಕ ತತ್ವಗಳನ್ನು ಚರ್ಚಿಸುವಾಗ ಇದರ ಒಳಗೆ ಸರ್ಕಾರಿ ಕೃಷಿ, ಹೈನುಗಾರಿಕೆಗಳನ್ನು ಸೇರ್ಪಡೆಮಾಡುವ ಬಗೆಗೆ ಕರಡು ರಚನಾ ಸಮಿತಿಯೂ ಗ್ರಹಿಸಿ ಅದನ್ನು

[7] ಅದೇ, ಪುಟ.77

ಸೇರ್ಪಡೆಗೊಳಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿರುತ್ತಾರೆ. ಈ ವಿಚಾರವನ್ನು ಪಂಡಿತ ಠಾಗೋರ್‌ದಾಸ್ ಭಾರ್ಗವ ಅವರು, "ಸರ್ಕಾರ ಕೃಷಿ ಮತ್ತು ಹೈನುಗಾರಿಕೆಯನ್ನು ಆಧುನಿಕ ಮತ್ತು ವೈಜ್ಞಾನಿಕ ರೀತಿಯಲ್ಲಿ ಅನುಷ್ಠಾನಕ್ಕೆ ತರಬೇಕು. ಹಾಗೆಯೇ ವಿಶೇಷವಾಗಿ ಪಶುಗಳ ತಳಗಳನ್ನು ರಕ್ಷಿಸುವ ಹಾಗೂ ಸುಧಾರಿಸಲು ಕ್ರಮಗಳನ್ನು ಕೈಗೊಳ್ಳಬೇಕು. ಇಲ್ಲಿ ಆಕಳು ಮತ್ತು ಮತ್ತಿತರ ಪಶುಗಳು, ಅದರಲ್ಲೂ ಹಾಲು ನೀಡುವ ಮತ್ತು ಬೇಸಾಯಕ್ಕೆ ಉಪಯೋಗಿಸುವ ಪಶು ಮತ್ತು ಕರುಗಳ ಕೊಲ್ಲುವಿಕೆಯನ್ನು ನಿಷೇದಿಸಬೇಕು"[೮] ಎಂದು ಹೇಳಿಕೆಯನ್ನು ನೀಡಿರುತ್ತಾರೆ. ಅಂದರೆ, ಈ ನೀತಿ–ನಿರ್ದೇಶನ ತತ್ವಗಳನ್ನು ಸಂವಿಧಾನದಲ್ಲಿ ಒಳಪಡಿಸುವ ಸಂದರ್ಭದಲ್ಲಿ ಇಂತಹ ವಿಚಾರಗಳನ್ನು ಕೂಡ ಇದರಲ್ಲಿ ಸೇರ್ಪಡೆಗೊಳಸುವುದು ಇವರ ಆದ್ಯಕರ್ತವ್ಯ ಆಗಿರುತ್ತದೆ. ಏಕೆಂದರೆ, ಇವರ ದೃಷ್ಟಿಯಲ್ಲಿ ಸರ್ಕಾರವೇ ಕೃಷಿಯ ಅಭಿವೃದ್ಧಿಗೆ ಸಹಕಾರವನ್ನು ನೀಡಬೇಕು. ಆ ಮೂಲಕ ಬೇಸಾಯಗಾರರು ಸರ್ಕಾರದಿಂದ ಸಹಕಾರವನ್ನು ಪಡೆದು ವ್ಯವಸಾಯಮಾಡಿ ತಮ್ಮ ಬದುಕನ್ನು ಸಾಗಿಸಲು ಸಾಧ್ಯ. ಅಂದರೆ, ಇವರಿಗೆ ಕೃಷಿಗೆ ಸಂಬಂಧಿಸಿದಂತೆ, ಕೃಷಿ ಸಲಕರಣೆಗಳು, ಭಿತ್ತನೆಬೀಜಗಳ, ಗೊಬ್ಬರ ಹಾಗೂ ಕೀಟನಾಶಕಗಳನ್ನು ಸರ್ಕಾರವೇ ನೀಡಿ ಇವರನ್ನು ವ್ಯವಸಾಯಕ್ಕೆ ಹಾಗೂ ಕೃಷಿಗೆ ಪ್ರೋತ್ಸಾಹವನ್ನು ನೀಡಬೇಕು.

ಸರ್ಕಾರವು ಹೀಗೆ ಕೃಷಿಗೆ ಪ್ರೋತ್ಸಾಹವನ್ನು ನೀಡಿದಾಗ, ಕೃಷಿಕರು ತಮ್ಮ ಸಂಪ್ರದಾಯಿಕ ಕೃಷಿ ವಿಧಾನವನ್ನು ಬಿಟ್ಟ ಆಧುನಿಕ ಕೃಷಿ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಬೇಕು. ಇಲ್ಲಿ ಯಂತ್ರಗಳನ್ನು ಅಳವಡಿಸಿ, ಕೃಷಿಯನ್ನು ಬಲಿಷ್ಠಗೊಳಸಬೇಕು ಎಂದೇ ಹೇಳಬಹುದು. ಹಾಗೆಯೇ ಹೈನುಗಾರಿಕೆಯನ್ನು ವೈಜ್ಞಾನಿಕ ರೀತಿಯಲ್ಲಿ ನಡೆಸಿದಾಗ, ಅತೀ ಹೆಚ್ಚಿನ ಲಾಭವನ್ನು ಇದನ್ನು ಮಾಡುತ್ತಿರುವ ಕೃಷಿ ಕಾರ್ಮಿಕರು ಗಳಸಬಹುದು. ಅಂದರೆ, ಹೈನುಗಾರಿಕೆಯಲ್ಲಿ ತಂತ್ರಜ್ಞಾನವನ್ನು ಕೂಡ ಅಳವಡಿಸಿ, ಅದರ ಸಹಾಯದಿಂದ ತಮ್ಮ ಹೈನುಗಾರಿಕೆಯನ್ನು ಅಭಿವೃದ್ಧಿಪಡಿಸಿಕೊಂಡು, ಆರ್ಥಿಕವಾಗಿ ಸಬಲರಾಗಲು ಸಾಧ್ಯವಾಗುತ್ತದೆ.

ಅಂಬೇಡ್ಕರ್ ಅವರು "ಸರ್ಕಾರವು ತನ್ನ ಸಾರ್ವಜನಿಕ ಸೇವೆಗಳಲ್ಲಿನ ನ್ಯಾಯಾಂಗವನ್ನು ಕಾರ್ಯಾಂಗದಿಂದ ಬೇರ್ಪಡಿಸಲು ಕ್ರಮಕೈಗೊಳ್ಳಬೇಕು"[೯] ಎಂಬ ವಿಚಾರವನ್ನು ಮಂಡಿಸಿದರು. ಅಂದರೆ, ಸಾರ್ವಜನಿಕ ಸೇವೆಯನ್ನು ಮಾಡುವಂತಹ ಸಂದರ್ಭದಲ್ಲಿ ಕಾರ್ಯಾಂಗಕ್ಕೆ ಈ ನ್ಯಾಯಾಂಗದ ಹಿಡಿತ ಇರುತ್ತದೆ. ಆದ್ದರಿಂದ ಇದರಿಂದ ಬೇರ್ಪಡಿಸಬೇಕು. ಏಕೆಂದರೆ, ಈ ರಾಜ್ಯನೀತಿ ನಿರ್ದೇಶಕ ಪಟ್ಟಿಗಳು ಮೂಲಭೂತ ಹಕ್ಕುಗಳ ಮಾದರಿಯಲ್ಲಿ ಉಲ್ಲಂಘನೆ ಆದರೆ, ಅದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಬಹುದು. ಆ ಮೂಲಕ ಅವುಗಳನ್ನು ಮತ್ತೇ ಪಡೆಯಲೂಬಹುದು. ಆದರೆ, ಈ ನಿರ್ದೇಶಕ ತತ್ವಗಳು ಸಮಾಜದಲ್ಲಿ

[8] ಅದೇ, ಪುಟ.೫೬
[೯] ಅದೇ, ಪುಟ.೬೦

ಆರ್ಥಿಕ ಅಸಮಾನತೆಯನ್ನು ನಿರ್ಮೂಲನೆಗೊಳ್ಳಿಸುವಲ್ಲಿ ಕಾರ್ಯಪ್ರವೃತ್ತವಾಗಿರುತ್ತವೆ. ಅಂದರೆ, ಇವುಗಳನ್ನು ಅನುಷ್ಠಾನಗೊಳಸಲೂಬಹುದು. ಅಥವಾ ಇಲ್ಲದೆಯೇ ಇರಬಹುದು. ಇದನ್ನು ಕಾರ್ಯಗತಗೊಳಸುವ ಜವಾಬ್ದಾರಿಯನ್ನು ಆಳುವ ಸರ್ಕಾರಗಳು ಕಾರ್ಯಾಂಗಕ್ಕೆ ನೀಡಿರುತ್ತದೆ. ಅಂದರೆ, ಜನಪ್ರತಿನಿಧಿಗಳು ಬಹುಮತ ಪಡೆದಿರುವ ಪಕ್ಷದಿಂದ ರಚಿತವಾದ ಮಂತ್ರಿಮಂಡಲದಲ್ಲಿ ಮಂತ್ರಿಗಳಾಗಬಹುದು.ಅದನ್ನೇ ಕಾರ್ಯಾಂಗ ಎನ್ನಬಹುದು. ಇದು ತನ್ನ ಕಾರ್ಯಾವ್ಯಾಪ್ತಿಯಲ್ಲಿ ಈ ನಿರ್ದೇಶಕ ತತ್ವವನ್ನು ಅನುಷ್ಠಾನಗೊಳಸಿಲ್ಲ ಎಂದರೆ, ನ್ಯಾಯಾಂಗವು ಈ ಕಾರ್ಯಾಂಗವನ್ನು ತರಾಟೆಗೆ ತೆಗೆದುಕೊಳ್ಳಬಹುದು ಎಂಬ ಕಾರ್ಯದಿಂದಲೇ ಇದನ್ನು ನ್ಯಾಯಾಂಗದಿಂದ ಬೇರ್ಪಡಿಸಬೇಕು ಎಂಬ ವಾದಗಳು ನಡೆದಿರುತ್ತವೆ.

ಈ ನಿರ್ದೇಶಕ ತತ್ವಗಳಲ್ಲಿ ದೇಶದ ಇತರ ಧರ್ಮೀಯರು ಪ್ರಾರ್ಥಿಸುವ ದೇವಾಲಯಗಳನ್ನು ರಕ್ಷಿಸಬೇಕು. ಹಾಗೆಯೇ ಎಲ್ಲ ವರ್ಗ ಹಾಗೂ ಧರ್ಮಗಳಲ್ಲಿನ ರುದ್ರಭೂಮಿ ಅಥವಾ ಶವಗಳನ್ನು ಸುಡುವ ಸ್ಥಳಗಳನ್ನು ಸಹ ರಕ್ಷಿಸುವ ಹೊಣೆಗಾರಿಕೆ ಈ ಸಕಾರಕ್ಕೆ ಇರುತ್ತದೆ. ಅಂದರೆ, ಭಾರತದಲ್ಲಿನ ವಿವಿಧ ಧರ್ಮ, ಜಾತಿ, ಜನಾಂಗಗಳಗೆ ತಮ್ಮದೇ ಆದಂತಹ ಆರಾಧ್ಯ ದೇವರುಗಳು ಇರುವುದು ಸನಾತನಿ ಕಾಲದಿಂದಲೂ ತಿಳದುಬಂದಿರುವ ಗಹನವಾದ ವಿಚಾರವೇ ಆಗಿರುತ್ತದೆ. ಆ ನಿಟ್ಟಿನಲ್ಲಿ ಇವುಗಳನ್ನು ರಕ್ಷಿಸುವುದೇ ಸರ್ಕಾರದ ಕೆಲಸ ಹಾಗೂ ಜವಾಬ್ದಾರಿಯೂ ಕೂಡ ಆಗಿರುತ್ತದೆ ಎಂದೇ ಹೇಳಬಹುದು. ಇದರೊಟ್ಟಿಗೆ ರಾಷ್ಟ್ರದಲ್ಲಿ ಶಾಂತಿ ಅಂದರೆ, ಅಂತರರಾಷ್ಟ್ರೀಯ ಶಾಂತಿ ಮತ್ತು ಸುಭದ್ರಗೊಳಸುವಲ್ಲಿ ಕಾರ್ಯಪ್ರವೃತ್ತರಾಗಬೇಕು ಎಂಬುದೇ ಆಗಿರುತ್ತದೆ.

ಒಟ್ಟಾರೆಯಾಗಿ ಈ ನಿರ್ದೇಶಕ ತತ್ವಗಳು ಕಡ್ಡಾಯವಾಗಿ ಅನುಷ್ಠಾನಗೊಳ್ಳದಿದ್ದರೂ ಅದನ್ನು ಕಾಲಕಾಲಕ್ಕೆ ಆಡಳತಕ್ಕೆ ಬರುವ ಸರ್ಕಾರಗಳು ಅವರ ಅಧಿಕಾರದ ಕಾಲಾವಧಿಯಲ್ಲಿ ತಕ್ಕಮಟ್ಟಿಗೆ ಚಾಲ್ತಿಗೆ ತರಲೇಬೇಕಾಗಿರುತ್ತದೆ. ಏಕೆಂದರೆ, ಮುಂದಿನ ದಿನಗಳಲ್ಲಿ ಮತ್ತೇ ಜನರ ಹತ್ತಿರ ಮತಕೊಳ್ಳಲು ಹೋಗಲೇಬೇಕು. ಆ ಕಾರಣವಾಗಿಯೇ ಇವುಗಳನ್ನು ಆದಷ್ಟರ ಮಟ್ಟಿಗೆ ಜಾರಿಗೊಳ್ಳಲು ಪ್ರಯತ್ನಿಸುತ್ತಾರೆ. ಆದ್ದರಿಂದ ಸಂವಿಧಾನ ರಚನಾಕಾರರು ಕಂಡಿದ್ದ ಕನಸು ಅಷ್ಟರ ಮಟ್ಟಿಗೆ ಕಾರ್ಯಗತವಾಗಿರುವುದಿಲ್ಲ.

ಒಟ್ಟಾರೆಯಾಗಿ, ಈ ತತ್ತ್ವಗಳು ನೂತನ ಪ್ರಜಾಸತ್ತಾತ್ಮಕ ಭಾರತದ ತಳಹದಿಗಳಾಗಿ ಪರಿಣಮಿಸುತ್ತವೆ. ಆದ್ದರಿಂದ ಭಾರತದ ಜನರು ಘೋಷಿಸಿಕೊಂಡು ಬಂದಿರುವ ಕನಿಷ್ಟ ಒಂದು ನಿರ್ದಿಷ್ಟ ಕಾಲವಧಿಯಲ್ಲಿ ಸಾಧಿಸಬೇಕೆಂದಿರುವ ಗುರಿಯನ್ನು ಅವು ಪ್ರತಿನಿಧಿಸುತ್ತವೆ. ಭಾರತದ ಸರ್ಕಾರವು ಈ ತತ್ತ್ವಗಳನ್ನು ವಾಸ್ತವಿಕವಾಗಿ ಅಳವಡಿಸಿಕೊಂಡರೆ **'ಸುಖೀರಾಜ್ಯ'** ಎಂಬ ಮಾತನ್ನು ನ್ಯಾಯಯುತವಾಗಿ ಸಂಪಾದಿಸಿಕೊಳ್ಳಬಹುದು. ಈ ರಾಜ್ಯನೀತಿ ನಿರ್ದೇಶಕ ತತ್ವಗಳು ನಿಜಕ್ಕೂ ಸರ್ಕಾರದ ಆಡಳತದಲ್ಲಿ

ಮಾರ್ಗದರ್ಶಿ ತತ್ತ್ವಗಳಾಗಿವೆ. ಏಕೆಂದರೆ ಇವುಗಳ ಮಾರ್ಗದರ್ಶನದ ಅಡಿಯಲ್ಲಿ ಭಾರತದಲ್ಲಿ ಆರ್ಥಿಕ ಪ್ರಜಾಪ್ರಭುತ್ವವನ್ನು ಜಾರಿಗೊಳಸಲು ಸಾಧ್ಯ. ಅದು ಹೇಗೆಂದರೆ, ಯಾವುದೇ ಒಂದು ರಾಜಕೀಯ ಪಕ್ಷವು ತನ್ನ ಆಡಳಿತದ ಕಾಲದಲ್ಲಿ ಶಾಸನವನ್ನು ಮಾಡದಿದ್ದರು, ಶಾಸನಸಭೆ ಮತ್ತು ಚುನಾವಣೆಯ ಸಂದರ್ಭದಲ್ಲಿ ಜನತೆಗೆ ಉತ್ತರಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಮಾರ್ಗಸೂಚಿಸುವುದೇ ಆದರೆ, ಈ ತತ್ವಗಳು ರಾಷ್ಟ್ರದ ಸಮಗ್ರ ಜನತೆಯ ಕಲ್ಯಾಣಕ್ಕೆ ಬದ್ಧವಾಗಿರುತ್ತದೆ. ಹಾಗಾಗಿಯೇ ಯಾವುದೇ ರಾಷ್ಟ್ರವೂ ಆಡಳಿತದ ಚುಕ್ಕಾಣಿ ಹಿಡಿದರೂ ಇವುಗಳನ್ನು ಅನುಷ್ಠಾನಕ್ಕೆ ತರಲೇಬೇಕು.